**Eco Youth Start-up Summit 2022**

CMRIT
CMR INSTITUTE OF TECHNOLOGY, BENGALURU.
ACCREDITED WITH A+ GRADE BY NAAC

**Publication: Kannada Prabha**
**Date:20.08.2022**

# ಸಿಎಂಆರ್ ಕಾಲೇಜಲ್ಲಿ 'ಇಕೋ ಯೂತ್' ನವೋದ್ಯಮ ಸ್ಪರ್ಧೆ

## ನಾವು ಸಂಸ್ಥೆ ಚಾಲಿತ ಅರ್ಥವ್ಯವಸ್ಥೆಯತ್ತ ಹೊರಳಬೇಕು: ಅಶ್ವತ್ಥ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಂದುವರಿದ ಹಲವು ದೇಶಗಳಲ್ಲಿ ಸಂಸ್ಥೆ ಚಾಲಿತ ಅರ್ಥ ವ್ಯವಸ್ಥೆ ಇದೆ. ಆದರೆ ನಮ್ಮಲ್ಲಿ ಕೈಗಾರಿಕೆ ಚಾಲಿತ ಅರ್ಥ ವ್ಯವಸ್ಥೆಯಿದೆ. ದೇಶ ಸಮಗ್ರವಾಗಿ ಅಭಿವೃದ್ಧಿಗೊಳ್ಳಬೇಕು ಎಂದಾದರೆ ಸಂಸ್ಥೆ ಚಾಲಿತ ಅರ್ಥ ವ್ಯವಸ್ಥೆಯತ್ತ ನಾವು ಹೊರಳುವುದು ಅಗತ್ಯ. ಈ ನಿಟ್ಟಿನಲ್ಲಿ ಹೊಸ ಶಿಕ್ಷಣ ನೀತಿ ಮಹತ್ವದ ಪಾತ್ರ ನಿಭಾಯಿಸಲಿದೆ ಎಂದು ಉನ್ನತ ಶಿಕ್ಷಣ ಮತ್ತು ಐಟಿ ಬಿಟಿ ಸಚಿವ ಡಾ. ಸಿ. ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನ, ಪರ್ಯಾವರಣ ಗತಿ ವಿಧಿ ಮುಂತಾದ ಸಂಘ ಸಂಸ್ಥೆಗಳ ಸಹಯೋಗದಿಂದ ಎರಡು ದಿನಗಳ ಕಾಲ ನಡೆಯಲಿರುವ 'ಇಕೋ ಯೂತ್' ನವೋದ್ಯಮ ಸ್ಪರ್ಧೆ ಮತ್ತು ಶೃಂಗಸಭೆಯನ್ನು ಅವರು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು.

ಕೈಗಾರಿಕಾ ಕ್ರಾಂತಿ ಮತ್ತಿತರ ಆಧುನಿಕ ಸಂಗತಿಗಳಿಂದ ಹವಾಮಾನ ಬದಲಾವಣೆ ತರಹದ ಗಂಭೀರ ಸಮಸ್ಯೆಗಳು ಎದುರಾಗಿವೆ. ಇವುಗಳಿಗೆ ಪಾಶ್ಚಾತ್ಯ ಮಾದರಿಯ ಪರಿಹಾರಗಳು ದುಬಾರಿಯಾಗಿವೆ. ಆದ್ದರಿಂದ ದೇಶೀಯ ಮಾದರಿಯ ಪರಿಹಾರಗಳನ್ನು ಕಂಡುಕೊಳ್ಳಬೇಕಾದ ಜರೂರಿದೆ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನ ಹಿರಿಯ ನಾಯಕ ನಾ. ತಿಪ್ಪೇಸ್ವಾಮಿ ಮಾತನಾಡಿ, ಪ್ಲಾಸ್ಟಿಕ್, ಇಲೆಕ್ಟ್ರಾನಿಕ್ ಉಪಕರಣಗಳ ಸಂಸ್ಕರಣೆ ಮತ್ತು ಪುನರ್ಬಳಕೆ ನಮ್ಮ ಹಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲದು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯ, ಬುದ್ಧಿಮತ್ತೆಯನ್ನು ಬಳಸಿ ಪರಿಸರ ಸ್ನೇಹಿ ಬದುಕು ರೂಪಿಸಲು ನೆರವಾಗಬೇಕು ಎಂದು ಕರೆ ನೀಡಿದರು.ನವೋದ್ಯಮಿ ಮೆಹಿನ್ ಮಹೇಶ್ವರಿ ಮಾತನಾಡಿ, ನವೋದ್ಯಮಿಗಳಲ್ಲಿ ಮಹತ್ವಾಕಾಂಕ್ಷೆಯ ಜೊತೆಗೆ ಸ್ವಯಂ ಅರಿವು ಇರಬೇಕೆಂದರು. ಸಿಎಂ ಆರ್ ಶಿಕ್ಷಣ ಸಂಸ್ಥೆಗಳ ಸಮೂಹದ ಉಪಾಧ್ಯಕ್ಷೆ ಡಾ. ತ್ರಿಷ್ಣಾ ರಾಮಮೂರ್ತಿ ಇದ್ದರು.



ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ಇಕೋ ಯೂತ್' ನವೋದ್ಯಮ ಸ್ಪರ್ಧೆ ಮತ್ತು ಶೃಂಗಸಭೆಯನ್ನು ಸಚಿವ ಡಾ. ಸಿ. ಎನ್.ಅಶ್ವತ್ಥ್ ನಾರಾಯಣ ಉದ್ಘಾಟಿಸಿದರು. ಆರ್ ಎಸ್ ಎಸ್‌ನ ಹಿರಿಯ ನಾಯಕ ತಿಪ್ಪೇಸ್ವಾಮಿ, ಸಿಎಂಆರ್ ಶಿಕ್ಷಣ ಸಂಸ್ಥೆಗಳ ಸಮೂಹದ ಉಪಾಧ್ಯಕ್ಷೆ ಡಾ.ತ್ರಿಷ್ಣಾ ರಾಮಮೂರ್ತಿ, ನವೋದ್ಯಮಿ ಮೆಹಿನ್ ಮಹೇಶ್ವರಿ ಇದ್ದರು.

**Publication: Kannada Prabha**
**Date:21.08.2022**



# ಪರಿಸರಸ್ನೇಹಿ ಸ್ಟಾರ್ಟಪ್‌ಗೆ ಆದ್ಯತೆ ನೀಡಿ: ರಾಜ್ಯಪಾಲ

**ಬೆಂಗಳೂರು:** ಹೊಸ ಮತ್ತು ಸೃಜನಾತ್ಮಕ ಪರಿಹಾರಗಳನ್ನು ಕಂಡುಕೊಳ್ಳುವ ಮೂಲಕ ಪರಿಸರ ಸಂರಕ್ಷಣೆಗಾಗಿ ಭಾರತ ಸರ್ಕಾರವು ಅನೇಕ ಸ್ಟಾರ್ಟ್ ಅಪ್‌ಗಳನ್ನು ಪ್ರೋತ್ಸಾಹಿಸುತ್ತಿದೆ. ಜಗತ್ತನ್ನು ಹಸಿರಾಗಿಡಲು ಸರ್ವ ಪ್ರಯತ್ನಗಳನ್ನು ಮಾಡುತ್ತೇವೆಂದು ಒಟ್ಟಾಗಿ ಪ್ರತಿಜ್ಞೆ ಮಾಡೋಣ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಕರೆ ನೀಡಿದರು. ಶನಿವಾರ ನಗರದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನ, ಪರ್ಯಾವರಣ ಗತಿ ವಿಧಿ ಸಂಸ್ಥೆಗಳು ಆಯೋಜಿಸಿದ್ದ ಇಕೋ ಯೂತ್ ಸ್ಟಾರ್ಟ್ ಅಪ್ ಶೃಂಗಸಭೆ-2022ಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿಎಂಆರ್ ವಿಶ್ವವಿದ್ಯಾಲಯದ ಮುಖ್ಯಸ್ಥ ಕೆ.ಸಿ.ರಾಮಮೂರ್ತಿ, ಗ್ರ್ಯಾಮಿ ಪ್ರಶಸ್ತಿ ವಿಜೇತ ಸಂಗೀತ ಸಂಯೋಜಕ ರಿಕ್ಕಿಕೇಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

**ವಿಜೇತ ಸಂಸ್ಥೆಗಳು:** ಸ್ಟಾರ್ಟ್ ಅಪ್‌ಗಳ ಸ್ಪರ್ಧೆಯಲ್ಲಿ ಕಾರ್ಬನ್ ಕ್ರಾಫ್ಟ್ಸ್ ಪ್ರೈವೇಟ್ ಕಂಪನಿ, ಕ್ರೈಬಾ ಬಾಟಲ್ಸ್ ಪ್ರೈ ಲೀ, ಫನ್ ಫಿಟ್ ನುಟ್ರಾ ಸಂಸ್ಥೆ.